(c) 122 cases are under investigation and 100 cases under inquiry. No. case has been dropped.

(d) The reasons for pendancy are want of.

i) documents and witnesses.

ii) relevant records from the concerned departments ;

iii) replies to the observation notes by the Accused Government officials, etc.

(e) The annual expenditure incurred for the year 1979-80 in the Vigilance Department was Rs. 36,70.000 including the salaries of staff.

ಗಮನ ಸೆಳೆಯಂವ ಸೂಚನೆಯಂ ಮೇಲಿನ ಚರ್ಚೆ

ವಿಷಯಂ : ಆರು ತಿಂಗಳಿಗೊಮ್ಮೆ ವಿದ್ಯುಚ್ಚಕ್ತಿ ಶುಲ್ಕ ಪಾವತಿ ಮಾಡುವ ವಿಷಯಂ.

ಶ್ರೀ ಎಂ.ಎಸ್. ಆತ್ಮಾನಂದ.—ಆರು ತಿಂಗಳಿಗೊಮ್ಮೆ ಗ್ರಾಹಕರು ವಿದ್ಯುಚ್ಚಕ್ತಿ ಶುಲ್ಕವನ್ನು ಪಾವತಿ ಮಾಡಬೇಕಾಗಿರುವುದರಿಂದಾಗಿ ಆಗಿರುವ ತೊಂದರೆ ಬಗ್ಗೆ ನಾನು ಮಾನ್ಯ ವಿದ್ಯುಚ ಕ್ತಿ ಖಾತೆಯ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜಿ.ಎಚ್. ಅಶ್ವತ್ಥರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ಆತ್ಮಾನಂದ ಅವರು ವಿದ್ಯುಚ್ಚಕ್ತಿ ಗೃಹ ಬಳಕೆದಾರರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಹೇಳಿದ್ದು ಆ ಬಗ್ಗೆ ನಾನು ಈ ಕೆಳಕಂಡಂತೆ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕರ್ನಾಟಕ ವಿದ್ಯುಚ್ಚಕ್ತಿ ಮಂಡಳಿಯು, ವಿದ್ಯುಚ್ಚಕ್ತಿ ಬಳಕೆದಾರರ ಮೇಲಿನ ವಿದ್ಯುಚ್ಚಕ್ತಿ ದರವನ್ನು ಪುನರ್ವಿಮರ್ಶಿಸಲು ಶ್ರೀ ಕೆ.ಎಸ್. ಸಬ್ರಮಣ್ಯಂರವರ ನೇತೃತ್ವದಲ್ಲಿ ಒಂದು ತಜ್ಞ ಸಮಿತಿಯನ್ನು ನೇಮಿಸಿತ್ತು. ಆ ತಜ್ಞ ಸಮಿತಿಯು ವಿದ್ಯುಚ್ಚಕ್ತಿ ದರಗಳನ್ನು ಪುನರ್ವಿಮರ್ಶೆ ಮಾಡಿ, ಎಲ್ಲ ಬಳಕೆದಾರರಿಗೆ ಅನ್ವಯಿಸುವಂತೆ ತನ್ನ ಶಿಫಾರ್ಸನ್ನು ಕರ್ನಾಟಕ ವಿದ್ಯುಚ್ಚಕ್ತಿ ಮಂಡಲಿಗೆ ಕಳಿಸಿತು. ಆ ಶಿಫಾರ್ಸಿನ ಪ್ರಕಾರ ಗೃಹ ಬಳಕೆದಾರರಿಗೆ ಅನ್ವಯಿಸುವ ದರಗಳನ್ನು ಇಳಿಸುವಂತೆ ಕೋರಿತ್ತು. ಈ ಶಿಫಾರ್ಸನ್ನು ವಿದ್ಯುಚ್ಚಕ್ತಿ ಮಂಡಳಿಯು ಪರಿಶೀಲಿಸಿ ಈ ಕೆಳಗೆ ಕಂಡ ನಿರ್ಣಯವನ್ನು ತೆಗೆದುಕೊಂಡಿತು. ಈ ನಿರ್ಣಯವು ೧-೨-೧೯೮೧ ರಿಂದ ಜಾರಿಗೆ ಬಂದಿದೆ.

ಎಲ್.ಟಿ.—೧ ಗೃಹ ಬಳಕೆದಾರರು	೧-೨-೧೯೮೧ ರ ವರೆಗೆ ಇದ್ದ ದರ	೧-೨ ೧೯೮೧ ರ ನಂತರ ಜಾರಿಗೆ ಬಂದಿರುವ ದರ
	ಳಿಗೆ ಪೈ ಒಂದು ಯುನಿಟ್ಟಿಗೆ ತಿಂಗಳ ಕನಿಷ್ಠ — ರೂ. ೨ ಮೀಟರ್ ಬಾಡಿಗೆ — ೫೦ ಪೈ.	ಯೋಜನೆ.— (ಅ) ೩೦ ಯೂನಿಟುಗಳ ವರೆಗೆ — ೬ ತಿಂಗಳ ಕನಿಷ್ಠ ರೂ — ೧೨ ೩೦ ಯೂನಿಟ್ಟಿಗಿಂತ ಮೇಲ್ಪಟ್ಟ ದರ ೫೦ ಪೈ (ಆ) ೭೫ ಯೂನಿಟಿನ ವರೆಗೆ ೬ ತಿಂಗಳ ಕನಿಷ್ಠ ರೂ ೩೦.೭೫ ಯುನಿಟ್‌ಗೆ ಮೇಲ್ಪಟ್ಟ ದರ ೫೦ ಪೈ.

(೨) ೧೫೦ ಯೂನಿಟ್‌ಗೆ ಕನಿಷ್ಠ ದರ ೬ ತಿಂಗಳಿಗೆ — ರೂ. ೬೦ ೧೫೦ ಯೂನಿಟ್‌ಗೆ ಮೇಲ್ಪಟ್ಟ ದರ ೫೦ ಪೈ ವ್ಯೋಟರ್ ಬಾಡಿಗೆ ಇಲ್ಲ.

ಈ ತಜ್ಞರ ಸಮಿತಿಯಂ ಮತ್ತೊಂದು ಸಲಹೆಯಂತೆ, ಗೃಹ ಬಳಕೆದಾರರ ವ್ಯೋಟರನ್ನು ೬ ತಿಂಗಳೊಂದು ಸಲ ಪರಿಶೀಲಿಸಿ ಬಿಲ್ ಮಾಡುವುದಾಗಿದೆ. ಈ ಸಮಿತಿಯ ದೃಷ್ಟಿ ಕೋನದಲ್ಲಿ ಹೀಗೆ ಆರು ತಿಂಗಳಿಗೊಮ್ಮೆ ಬಿಲ್ ಮಾಡುವುದರಿಂದ, ಗೃಹ ಬಳಕೆದಾರರಿಗೆ ಸಹಾಯವಾಗುವುದಲ್ಲದೆ ವಿದ್ಯುಚ್ಛಕ್ತಿ ಮಂಡಳಿಗೂ ಖರ್ಚು ಉಳಿತಾಯವಾಗುತ್ತದೆ? ಈ ಸಂದರ್ಭದಲ್ಲಿ ಕೈಗೊಂಡ ಸಮೀಕ್ಷೆಯ ಪ್ರಕಾರ ಪ್ರತಿಯೊಂದು ವ್ಯೋಟರಿನ ಪರಿಶೀಲನೆಯಂ ಸರಾಸರಿ ಖರ್ಚು ತಿಂಗಳಿಗೆ ೪ ರೂ ನಿಂದ ೫ ರೂ ಗಳಿಗೆ ತಗಲುತ್ತದೆ. ಇದಕ್ಕೆ ತುಲನೆ ಮಾಡಿ ನೋಡಿದಾಗ, ವಿದ್ಯುಚ್ಛಕ್ತಿ ಮಂಡಳಿಯಂ ಆದಾಯ ಎಲ್.ಟಿ.—೧ ವಿಭಾಗಗಳಲ್ಲಿ ಖರ್ಚಿಗಿಂತ ಕಡಿಮೆ ಆಗಿದೆ.

ವಿವರಗಳಂ ಈ ರೀತಿ ಇದೆ.
ಸಮೀಕ್ಷೆಯಿಂದ ತಿಳಿದು ಬಂದ ವಿವರ

(ಒಟ್ಟು ಎಲ್.ಟಿ.—೧ ಬಳಕೆದಾರರು — ೧೪ ಲಕ್ಷ)	
(ಅ) ಗೃಹ ಬಳಕೆದಾರರ ಶೇ ಹತ್ತರಷ್ಟು (೧೫) ರಲ್ಲಿ ಮನೆಗಳಿಂದ ಬರುವ ಆದಾಯ	೬ ತಿಂಗಳಿಗೆ ಕೇವಲ ರೂ ೧೨ (ಸರಾಸರಿ)
(ಆ) ಗೃಹ ಬಳಕೆದಾರರ ಶೇ ೪೫ (೪೫) ಬರುವ ಆದಾಯ	೬ ತಿಂಗಳಿಗೆ ಕೇವಲ ರೂ ೩೦ (ಸರಾಸರಿ)
(ಇ) ಉಳಿದ ಶೇ ೪೫ (೪೫) ಬರುವ ಆದಾಯ	೬ ತಿಂಗಳಿಗೆ ರೂ ೫೦ ರಿಂದ ರೂ ೬೦ (ಸರಾಸರಿ)

ಮೇಲೆ ಹೇಳಿರುವ ವಿವರಗಳಿಂದ ಗೃಹ ಬಳಕೆದಾರರಿಗೆ ೬ ತಿಂಗಳಿಗೊಮ್ಮೆ ಬಿಲ್ ಪಾವತಿ ಮಾಡುವುದರಿಂದ, ಅನಾನುಕೂಲವೇನೂ ಆಗುವುದಿಲ್ಲ. ಗೃಹ ಬಳಕೆದಾರರಿಗೆ ಪಂತ್ತು ಅನುಕೂಲವಾಗುವಂತೆ. ಅವರು ಬಿಲ್ ಹಣವನ್ನು ವಿದ್ಯುಚ್ಛಕ್ತಿ ಮಂಡಲಿಗೆ ತಿಂಗಳಿಗೊಮ್ಮೆ ಅಥವಾ ಎರಡು ತಿಂಗಳಿಗೊಮ್ಮೆ ಅಥವಾ ಮೂರು ತಿಂಗಳಿಗೊಮ್ಮೆ (ತಮ್ಮ ಅನುಕೂಲಕ್ಕನುವಾಗಿ) ಪಾವತಿ ಮಾಡಬಹುದಾದ ಯೋಜನೆ ಪರಿಶೀಲನೆಯಲ್ಲಿದೆ. ಆಷ್ಟೆ ಅಲ್ಲದೆ ಯಾವ ಬಳಕೆದಾರರು ತಮ್ಮ ಬಿಲ್ ಹಣವನ್ನು ಮುಂಗಡವಾಗಿ ಕಟ್ಟಿದ್ದಾದರೆ, ಅಂತಹವರಿಗೆ ಬಿಲ್ ಹಣದಲ್ಲಿ ಸೂಕ್ತ ನೋಡಿ ಬಿಡುವ ಯೋಚನೆಯೂ ಇದೆ.

ಮೇಲೆ ತಿಳಿಸಿದ ಅಂಶಗಳಿಂದ, ಕಂಡು ಬರುವಂತೆ, ೬ ತಿಂಗಳಿಗೊಮ್ಮೆ ಬಿಲ್ ಪಾವತಿ ಮಾಡುವ ಯೋಚನೆಯಿಂದ ಯಾವ ಗೃಹ ಬಳಕೆದಾರರಿಗೂ ಅನಾನುಕೂಲವಾಗುವುದಿಲ್ಲ.

ಶ್ರೀ ಎಂ.ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೆ, ಶ್ರೀ ಕೆ.ಎಸ್. ಸುಬ್ರಮಣ್ಯಂ ನೇತೃತ್ವದಲ್ಲಿ ತಜ್ಞರ ಸಮಿತಿಯನ್ನು ಬಳಕೆದಾರರ ಮೇಲಿನ ವಿದ್ಯುಚ್ಛಕ್ತಿ ದರವನ್ನು ಪುನರ್ವಿಮರ್ಶಿಸಲು ನೇಮಿಸಲಾಗಿದ್ದು ಅವರ ಶಿಫಾರಸ್ಸಿನನ್ವಯ ಬಳಕೆದಾರರು ೬ ತಿಂಗಳಿಗೆ ಒಂದು ಬಾರಿ ವಿದ್ಯುತ್ ಶುಲ್ಕ ಪಾವತಿ ಮಾಡುವ ವಿಚಾರ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಪ್ರಸ್ತುತ ಒಂದು ತಿಂಗಳ ಶುಲ್ಕವನ್ನು ಪಾವತಿ ಮಾಡಲು ಬಹಳ ತೊಂದರೆಯಲ್ಲಿರುವ ಬಳಕೆದಾರರಿಗೆ ಈ ಆರು ತಿಂಗಳ ಶುಲ್ಕ ಅವರಿಗೆ ಭಾರವಾಗುತ್ತದೆ. ಮಾನ್ಯ ಮಂತ್ರಿಗಳು ''ಬಳಕೆದಾರರು ಬಿಲ್ ಹಣವನ್ನು ವಿದ್ಯುಚ್ಛಕ್ತಿ ಮಂಡಲಿಗೆ ತಿಂಗಳಿಗೊಮ್ಮೆ ಅಥವಾ ಎರಡು ತಿಂಗಳಿಗೊಮ್ಮೆ ಅಥವಾ ಮೂರು ತಿಂಗಳಿಗೋಮ್ಮೆ (ತಮ್ಮ ಅನುಕೂಲಕಾನುವಾಗಿ) ಪಾವತಿ ಮಾಡಬಹುದಾದ ಯೋಜನೆ ಪರಿಶೀಲನೆಯಲ್ಲಿದೆ'' ಎಂದು ಹೇಳಿದರು. ಈ ಯೋಜನೆ ಜಾರಿಗೆ ಬರಬೇಕು. ಹಾಗೂ ಈ ಒಂದು ಹಣವನ್ನು ಕೊಡುವ ವಿಚಾರವನ್ನು ಬಳಕೆದಾರರ ಆಪ್ಷನ್‌ಗೇ ಬಿಡಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳುತ್ತೇನೆ. ಚೈತನ್ಯ ಇದ್ದವರು ೧ ತಿಂಗಳಿಗೇ ಕೊಡಲಿ, ಅಥವಾ ೬ ತಿಂಗಳಿಗೇ ಕೊಡಲಿ. ಈ ಒಂದು ಪದ್ಧತಿಯನ್ನು ಮಾನ್ಯ ಮಂತ್ರಿಗಳಂ ಜಾರಿಗೇ ತರುತ್ತಿರೆಯೇ?

ಶ್ರೀ ಜಿ.ಎಸ್. ಅಶ್ವತ್ಥರೆಡ್ಡಿ.—ಅಧ್ಯಕ್ಷರೆ, ನಾನು ಈಗಾಗಲೇ ಉತ್ತರದಲ್ಲಿ ತಿಳಿಸಿದ್ದೇನೆ. ಪಣವನ್ನು ೬ ತಿಂಗಳಲ್ಲಿ ಕೊಡತಕ್ಕದ್ದೆಂದೂ ೧ ತಿಂಗಳಿಗೆ, ಅಥವಾ ೩ ತಿಂಗಳಿಗೆ ಒಂದು ಬಾರಿ ಅವರು ಪಾವತಿ ಮಾಡಿದ ಪಕ್ಷದಲ್ಲಿ ಅವರಿಗೆ ರಿಯಾಯಿತಿ ಕೊಡಬೇಕೆಂದು ನಾವು ತೀರ್ಮಾನಿಸಿದ್ದೇವೆ. ೫ ಪರ್ಸೆಂಟ್ ಕನ್ಸೆಷನ್ ಕೊಡಬೇಕೆಂದು ಮಾಡಿದ್ದೇವೆ. ಇದರಿಂದ ಸರ್ಕಾರಕ್ಕೆ ಬಹಳ ಉಳಿತಾಯವಾಗುತ್ತದೆ. ಇದರಿಂದಾಗಿ ಮಂಡಲಿಗೆ ಒಂದು ಒಂದೂವರೆ ಕೋಟಿ ರೂಪಾಯಿ ಉಳಿತಾಯವಾಗುತ್ತದೆ. ಈ ಸಂಪನ್ಮೂಲಗಳನ್ನು ಕ್ರೂಢೀಕರಿಸಿ ಹಳ್ಳಿಗಳಲ್ಲಿನ ನೀರಾವರಿ ಬಾವಿಗಳಿಗೆ ವಿದ್ಯುತ್ ಒದಗಿಸಬಹುದು. ಇದರಿಂದಾಗಿ ಬೇರೆ ಉದ್ಯಮಗಳಿಗೆ ಹೆಚ್ಚಿನ ವಿದ್ಯುತ್ತನ್ನು ಒದಗಿಸಬಹುದು. ಇದರಿಂದ ಬೇರೆಯವರಿಗೆ ನೌಕರಿಯನ್ನು ಒದಗಿಸುವ ಅನುಕೂಲವಾಗುತ್ತದೆ. ಹಳ್ಳಿಗಳ ಉದ್ಧಾರ ಮಾಡಿದಂತಾಗುತ್ತದೆ ಈ ಒಂದು ಕಾರ್ಯಕ್ರಮವನ್ನು ಬಹಳ ಜನರು ಸ್ವಾಗತಿಸುತ್ತಿದ್ದಾರೆ. ಬಳಿಕೆದಾರರು ತಿಂಗಳಿಗೊಂದು ಬಾರಿಯಂತೆಯೂ ಹಣವನ್ನು ಪಾವತಿ ಮಾಡಬಹುದು, ಆ ಬಗ್ಗೆ ತೊಂದರೆಯಿಲ್ಲ.

Representation by Members

SRI B.B. SAYANAK.—Sir, I have given a motion under Rule 309. On 23rd June this House has passed a motion. I am of Opinion that when there is democracy in India, there must be the Opposition.

MR. SPEAKER.—I have received the motion. But, I want you to meet me in my chamber. I have something to say. Before this is put, I will have to get it circulated also. For some technical thing, you please meet me in my chamber. I very well understand the intention of the motion. But, before I can say or you can say anything about it, meet me sometime later.

SRI B.B. SAYANAK.—If that is the case, I request the Speake to call the Leader of the Opposition for discussion.

MR. SPEAKER.—In respect of the motion only, please meet me in my chamber. Some technical thing is there. After 10 or 15 minutes you can meet me in my chamber.

LEGISLATIVE BUSINESS

* THE KARNATAKA MUNICIPALITIES (SECOND AMENDMENT) BILL, 1981.

Leave to introduce

SRI Y. RAMAKRISHNA (Minister for Law and Parliamentary Affairs).—Mr. Speaker Sir, on behalf of the Minister for Housing and Urban Development I beg to move.

"That leave be granted to introduce the Karnataka Municipalities (Second Amendment) Bill, 1981".

---

*ANNEXURE